5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ಕುಗ್ರಾಮ – ಸುವರ್ಣ ಗ್ರಾಮ ಯೋಜನೆಯ ಅನುಷ್ಠಾನಕ್ಕೆ ಶಾಸಕ ರಹಿತ ಸಮಿತಿ ರಚಿಸಿರುವ ಬಗ್ಗೆ. :

ಅಧ್ಯಕ್ಷರು :– ಈಗ ಮಾನ್ಯ ಸದಸ್ಯರು .....

(ಗೊಂದಲ)

ಶ್ರೀ ಹೆಚ್. ನಿಂಗಪ್ಪ (ಕುಣಿಗಲ್) :– ಮಾನ್ಯ ಅಧ್ಯಕ್ಷರೆ, ಈಗ ನಾವು ಚುನಾಯಿತ ಸದಸ್ಯರು ಗ್ರಾಮೀಣ ಪ್ರದೇಶಕ್ಕೆ ಹೋದಂಥ ಕಾಲದಲ್ಲಿ ' ಯಾರಾದರೂ ಮಾನಮರ್ಯಾದೆ ಇರುವಂಥವರು ಶಾಸಕರು ಆಗಬಾರದೆಂದು' ನನಗನಿಸುತ್ತದೆ. ಇವತ್ತು ಎಲ್ಲಿ ನೋಡಿದರೂ ಮನೆ ಕೇಳುತ್ತಾರೆ, ನಿವೇಶನ ಕೇಳುತ್ತಾರೆ, ಕುಡಿಯುವ ನೀರು ಹೀಗೆ ಪ್ರತಿಯೊಂದನ್ನು ಕೇಳುತ್ತಾರೆ. ವಿಕೇಂದ್ರೀಕರಣದ ಹೆಸರಿನಲ್ಲಿ ಬೇರೆಯವರಿಗೆ ಅಧಿಕಾರ ಕೊಟ್ಟರೆ ನಾವು ಶಾಸಕರಾಗಿ ಏನು ಮಾಡಬೇಕೆಂಬುದು ಗೊತ್ತಾಗುತ್ತಿಲ್ಲ. ದಯಮಾಡಿ ಇವತ್ತು ಈ ರಾಜ್ಯದಲ್ಲಿ ಯಾವುದೇ ಒಂದು ರಚನೆಯಾಗಿಲ್ಲ. ಈಗ ಆಗೆತಕ್ಕಂಥ ಸಮಿತಿಗಳಲ್ಲಿ ಸಹ ಶಾಸಕರನ್ನು ಹೊರಗಿಟ್ಟು ಸಮಿತಿಯನ್ನು ರಚನೆ ಮಾಡುವುದರಿಂದನೇ ನಮ್ಮ ಅಧಿಕಾರವನ್ನು ಮೊಟಕುಗೊಳಿಸಿದಂತಾಗುತ್ತದೆ. ಜೊತೆಗೆ, ನಮಗೆ ಅಧಿಕಾರದಲ್ಲಿ ಇಲ್ಲದೇ ಇದ್ದಂಥ ಸಂದರ್ಭದಲ್ಲಿ ನಾವು ಜನಗಳಿಗೆ ಉತ್ತರ ಕೊಡುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ, ಇವತ್ತು ವಿರೋಧ ಪಕ್ಷದವರು ಏನು ಇವತ್ತು ಧರಣಿ ಮಾಡುತ್ತಿದ್ದಾರೆ, ಅವರಿಗೆ ಬೆಂಬಲ ಕೊಡುತ್ತೇವೆ. ನಾವು ಕೂಡ ವೆಲ್‌ಗೆ ಬರುತ್ತೇವೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಹೆಚ್. ನಿಂಗಪ್ಪನವರು ಧರಣಿಗೆಂದು ಸದನದ ಬಾವಿಗೆ ಆಗಮಿಸುತ್ತಿದ್ದರು)

(ಗೊಂದಲ)

ಅಧ್ಯಕ್ಷರು :– ಈಗ ದಯಮಾಡಿ ಕೇಳಿ ಇಲ್ಲಿ. ಮಾನ್ಯ ಸದಸ್ಯರು ....

(ಗೊಂದಲ)

ಅಧ್ಯಕ್ಷರು :– ಮಾತನಾಡಲಿ ಎಂದರೆ ...

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) (ತಮ್ಮ ಸ್ಥಾನದಿಂದ):- ಪಕ್ಷಭೇದ ಇಲ್ಲ. ಎಲ್ಲಾ ಆಡಳಿತ ಪಕ್ಷ, ವಿರೋಧ ಪಕ್ಷ ಅನ್ನುವುದು ಯಾವುದೂ ಭೇದ ಭಾವನೆ ಇಲ್ಲ. ಒಂದು ಅಭಿಪ್ರಾಯಕ್ಕೆ ಬರಲಿ.

(ಗೊಂದಲ)

ಶ್ರೀ ಎನ್. ರಾಜಣ್ಣ :- ಏನೂ ಮಾಡಿಲ್ಲ, ನಾವೂ ಕೂಡ ಧರಣಿಯಲ್ಲಿ ಬಂದು ಸೇರುತ್ತೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎನ್. ರಾಜಣ್ಣರವರು ಧರಣಿಗೆಂದು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು :- ಈಗ ದಯಮಾಡಿ ಕೇಳಿ ಇಲ್ಲಿ . ದಯಮಾಡಿ ಕೇಳಿ.

(ಗೊಂದಲ)

ಅಧ್ಯಕ್ಷರು :- ಈಗ ದಯಮಾಡಿ ಕೇಳಿ.

(ಗೊಂದಲ)

ಅಧ್ಯಕ್ಷರು :- ಆಯಿತು. ಎಲ್ಲಾ ಅಭಿಪ್ರಾಯವನ್ನೂ... ಯಡಿಯೂರಪ್ಪನವರೆ....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಸಾರ್, ಪ್ರಿವಿಲೆಜ್ ಆಗುತ್ತದೆ. ಅವರನ್ನು ತಡೆಯುವುದು ಪ್ರಿವಿಲೆಜ್ ಆಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ (ತಮ್ಮ ಸ್ಥಾನದಿಂದ) :- ಪಕ್ಷಭೇದ ಮರೆತು ಇಲ್ಲಿ ಆಡಳಿತ ಪಕ್ಷ, ವಿರೋಧ ಪಕ್ಷ.....

(ಗೊಂದಲ)

ಅಧ್ಯಕ್ಷರು :- ದಯಮಾಡಿ ಕೇಳಿ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಅಸೆಂಬ್ಲಿ ಒಳಗೆ ಮಂತ್ರಿಗಳು ಮುಟ್ಟಿದರೆ ಕೂಡ ಪ್ರಿವಿಲೆಜ್ ಆಗುತ್ತದೆ ಸಾರ್.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ :– ಗೌರವ ಕೊಡುತ್ತಿದ್ದೇವಲ್ಲಾ ಸಾರ್.....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಹೋಗಿ ಕೈ ಹಿಡಿದು ತಡೆಯುವುದು ಪ್ರಿವಿಲೆಜ್ ಆಗುತ್ತದೆ. ತಾವು ಮಿನಿಸ್ಟರ್‌ಗೆ ವಾರ್ನ್ ಮಾಡಬೇಕು. ಏನು ಸಾರ್ ಇದು? ಇದು ಅಸೆಂಬ್ಲಿನಾ ಸಾರ್? ಅವರಿಗೆ ಹಕ್ಕಿಲ್ಲವೇ ಸಾರ್ ಇಲ್ಲಿ? ಏನು ಮಿನಿಸ್ಟರ್‌ಗಳೆಲ್ಲಾ ಹೋಗಿ ತಡೆಯುವಂಥ ಸ್ಥಿತಿ ಏನಿದೆ ಸಾರ್ ಇಲ್ಲಿ?

(ಗೊಂದಲ)

ಅಧ್ಯಕ್ಷರು :– ಮಾತನಾಡಬೇಡಿ. ಇದೇನಿದು?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಎಳೆದುಕೊಂಡು ಹೋಗುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು :– ಆಯಿತು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಎಳೆದುಕೊಂಡು ಹೋಗುತ್ತಿದ್ದಾರೆ.....

(ಗೊಂದಲ)

ಅಧ್ಯಕ್ಷರು :– ಯಡಿಯೂರಪ್ಪನವರೇ.....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಏನು ಅಸೆಂಬ್ಲಿನಾ ಇದು?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರು ಇಲ್ಲಿ ಹೇಗೆ ಸಾರ್ ತಡೆಯುತ್ತಾರೆ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಹೇಗೆ ತಡೆಯುತ್ತಾರೆ?

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಹೋಗಿ ಎಳೆದುಕೊಂಡು ಹೋಗುತ್ತಿದ್ದಾರಲ್ಲಾ ಸಾರ್ ಮೆಂಬರ್‌ಗಳನ್ನು

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಸಾರ್, ಇದು ಪ್ರಿವಿಲೆಜ್. ದಯಮಾಡಿ ಇದನ್ನು ಪ್ರಿವಿಲೆಜ್‌ಗೆ ತೆಗದುಕೊಳ್ಳಬೇಕು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ನಿಮ್ಮೆದುರಿಗೇ ನಿಂತುಕೊಂಡು ಎಳೆದುಕೊಂಡು ಹೋಗುತ್ತಿದ್ದಾರೆ ಮೆಂಬರ್ಸ್ ಅನ್ನು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಸಾರ್, ಇದು ಪ್ರಿವಿಲೆಜ್. ದಯಮಾಡಿ ತಾವು ಇದನ್ನು ಅಲೋ ಮಾಡಕೂಡದು. ಶಾಸನ ಸಭೆಯಲ್ಲಿ ಎಂಎಲ್‌ಎಗಳನ್ನು ಎಳೆದುಕೊಂಡು.....

(ಗೊಂದಲ)

ಅಧ್ಯಕ್ಷರು :– ದಯಮಾಡಿ ಎಲ್ಲಾ ಕುಳಿತುಕೊಳ್ಳಿ. ದಯಮಾಡಿ ನಿಮ್ಮ ನಿಮ್ಮ ಸೀಟ್‌ಗೆ ಹೋಗಿ.

(ಗೊಂದಲ)

ಅಧ್ಯಕ್ಷರು :– ದಯಮಾಡಿ ಕುಳಿತುಕೊಳ್ಳಬೇಕು. ಗಲಾಟೆ ಮಾಡಬೇಡಿ.

(ಗೊಂದಲ)

ಅಧ್ಯಕ್ಷರು :– ಆಯಿತು ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :– ಈಗ ನೀವು ಧರಣ..... ಕೆಲವು ವಿಚಾರಗಳನ್ನು.....

(ಗೊಂದಲ)

(ಸದನದ ಬಾವಿಯಲ್ಲಿದ್ದ ಸದಸ್ಯರುಗಳು ಮಾತನಾಡುತ್ತಿದ್ದರು)

ಅಧ್ಯಕ್ಷರು :– ಆಯಿತು ಬಿಡ್ರಿ. ದಯಮಾಡಿ ಎಲ್ಲಾ ಕುಳಿತುಕೊಳ್ಳಿ. ಈಗ ಕೆಲವು ವಿಚಾರಗಳನ್ನು.....

(ಗೊಂದಲ)

ಅಧ್ಯಕ್ಷರು :– ಏನಿದು? ಈ ತರಹವಾದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು :– ಈಗ ಏನೆಂದರೆ, ನೀವು ಕೆಲವು ಶಾಸಕರ ಬೇಡಿಕೆಗಳನ್ನು ಕುರಿತು ಇಲ್ಲಿ ಧರಣಿ ಮಾಡುತ್ತಿದ್ದೀರಿ. ಕೆಲವು ಶಾಸಕರು ಆಡಳಿತ ಪಕ್ಷದವರು ಒಬ್ಬಿಬ್ಬರೂ ಕೂಡ ಅವರ ಆತ್ಮದಲ್ಲೇನಿದೆ ಎನ್ನುವುದನ್ನು ಹೇಳಿದ್ದಾರೆ. ಆ ಕಾರಣದಿಂದ ದಯಮಾಡಿ ನಾನು, ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು, ನಿಮ್ಮನ್ನು ಎಲ್ಲರನ್ನೂ ಕರೆದು ಅದನ್ನು ಕುರಿತು ಚರ್ಚೆ ಮಾಡಿ ಶಾಂತಿಯುತವಾಗಿ ಬಗೆಹರಿಸಲು ಸೋಮವಾರ ಪ್ರಯತ್ನ ಮಾಡುತ್ತೇನೆ. ಆದುದರಿಂದ ನೀವೆಲ್ಲರೂ ತಮ್ಮ ತಮ್ಮ ಸೀಟುಗಳಿಗೆ ಹೋಗಬೇಕು. ಈಗ ಪ್ರಶ್ನೋತ್ತರ ಆರಂಭ ಮಾಡೋಣ. ದಯಮಾಡಿ ಸಹಕರಿಸಿ.

ಶ್ರೀ ಕೆ.ಎಸ್. ಈಶ್ವರಪ್ಪ :– ಆಡಳಿತ ಪಕ್ಷ ಮತ್ತು ವಿರೋಧ ಪಕ್ಷ ಎಲ್ಲರಿಗೂ ಒಂದೇ ಉತ್ತರ ಹೇಳಲಿ. ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರಿಬ್ಬರದೂ ಒಂದೇ ಅಭಿಪ್ರಾಯ ಇದೆ. ಇಂತಹ ಸಂದರ್ಭದಲ್ಲಿ.....

(ಗೊಂದಲ)

6. ಪ್ರಕಟಣೆ

ಸದನದಲ್ಲಿ ಉತ್ತರಿಸುವ ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳ ಮಂಡನೆ.

ಅಧ್ಯಕ್ಷರು :– ದಿನಾಂಕ 14–07–2005 ರ 30 ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 13 ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 55 ಪ್ರಶ್ನೆಗಳ ಪೈಕಿ 51 ಉತ್ತರಗಳನ್ನು ಹಾಗೂ ದಿನಾಂಕ 15–07–2005 ರ 31 ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 15 ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 76 ಪ್ರಶ್ನೆಗಳ ಪೈಕಿ 68 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅನುಬಂಧ –1

(ಈಗ ಸದನವನ್ನು ಸೋಮವಾರ ಬೆಳಿಗ್ಗೆ 11 : 00 ಗಂಟೆಗೆ ಸೇರುವಂತೆ ಮುಂದೂಡುತ್ತಿದ್ದೇನೆ.)

(ಸದನವು ಮಧ್ಯಾಹ್ನ 1 ಗಂಟೆ 25 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 18 ನೇ ಜುಲೈ 2005 ಸೋಮವಾರದಂದು ಬೆಳಿಗ್ಗೆ 11 : 00 ಗಂಟೆಗೆ ಸೇರಲು ನಿಶ್ಚಯಿಸಿತು.)